ಕೆರೆ ಕಾಲುವೆ ಕಾಮಗಾರಿ

195(570); ಶ್ರೀ ಬಣಕಾರ್ ಯು. ಬಿ.

ಅ) ಹಿರೇಕೆರೂರು ಕೆರೆಗೆ ನೀರು ಬರುವ ಕಾಲುವೆ, ಹಿರೇಕೆರೂರು ನಗರದ ಮಧ್ಯಭಾಗದಲ್ಲಿ ಹಾಯ್ದು ಹೋಗಿದ್ದು, ಇದು ಹೂಳು, ಗಿಡಗಂಟೆಗಳಿಂದ ತುಂಬಿ ಹೋಗಿದ್ದು, ಕೆರೆಯ ಕಾಮಗಾರಿಗೆ ಹಾಗೂ ಕಾಲುವೆ ರಿಪೇರಿಗೆ ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಯಾವುವು ?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಹಿರೇಕೆರೂರು ಕೆರೆಗೆ ನೀರು ಬರುವ ಕಾಲುವೆಯು ಹಿರೇಕೆರೂರು ಪಟ್ಟಣದ ಮಧ್ಯಭಾಗದಲ್ಲಿ 1 ಕಿ. ಮೀ. ಉದ್ದಕ್ಕೆ ಹಾಯ್ದು ಹೋಗಿದೆ. ಸದರಿ ಕಾಲುವೆಯ ಸಂಪೂರ್ಣ ಉದ್ದಕ್ಕೆ ಹೋಳು ತೆಗೆಯಲು, ಪಟ್ಟಣ ವ್ಯಾಪ್ತಿಯಲ್ಲಿ ಕಾಲುವೆಗೆ 1 ಕಿ.ಮೀ. ಉದ್ದಕ್ಕೆ ಕಾಂಕ್ರೀಟ್ ಲೈನಿಂಗ್ ಮಾಡಲು ಹಾಗೂ ಸೇತುವೆ ನಿರ್ಮಿಸಲು, ಜಂಗಲ್ ತೆಗೆಯಲು ಹಾಗೂ ಬಂಡ್ ಸುಧಾರಣೆ ಕಾಮಗಾರಿ ಕೈಗೊಳ್ಳಲು ₹.300.00 ಲಕ್ಷ ಅಂದಾಜು ವೆಚ್ಚದ ಅವಶ್ಯಕತೆ ಇರುವುದು. ಪ್ರಸ್ತುತ ಈ ಕಾಮಗಾರಿಗೆ ಅನುದಾನ ಲಭ್ಯವಿರುವುದಿಲ್ಲ.

ಮುಜುರಾಯಿ ಇಲಾಖೆಯಿಂದ ಹಣ ಬಿಡುಗಡೆ

196(571); ಶ್ರೀ ಬಣಕಾರ್ ಯು. ಬಿ.

ಅ) ಮುಜರಾಯಿ ಇಲಾಖೆಯಿಂದ ಪ್ರತಿ ತಾಲ್ಲೂಕಿಗೆ ಸರ್ಕಾರ 2012–13 ನೇ ಸಾಲಿಗೆ ಬಿಡುಗಡೆ ಮಾಡಿದ ಮೊತ್ತ ಎಷ್ಟು;

ಆ) 2013–14 ನೇ ಸಾಲಿಗೆ ತಾಲ್ಲೂಕುವಾರು ನಿಗದಿ ಮಾಡಿದ ಮೊತ್ತ ಎಷ್ಟು ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)

ಅ) 2012–13ನೇ ಸಾಲಿನಲ್ಲಿ ರಾಜ್ಯದ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ ಜೀರ್ಣೋದ್ಧಾರ/ ನವನಿರ್ಮಾಣಕ್ಕಾಗಿ ಅನುದಾನದ ಲಭ್ಯತೆಗನುಗುಣವಾಗಿ ಜಿಲ್ಲಾವಾರು 5835 ಧಾರ್ಮಿಕ ಸಂಸ್ಥೆಗಳಿಗೆ ₹ 25022.43 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

ಆರಾಧನಾ, ಗಿರಿಜನಉಪಯೋಜನೆ, ವಿಶೇಷ ಘಟಕ ಯೋಜನೆ ಯಡಿಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಆರಾಧನಾ	₹ 837.20ಲಕ್ಷ
ಗಿರಿಜನ ಉಪಯೋಜನೆ	₹ 324.40ಲಕ್ಷ
ವಿಶೇಷ ಘಟಕ ಯೋಜನೆ	₹ 838.40ಲಕ್ಷ

ಆ) 2013–14 ನೇ ಸಾಲಿನಲ್ಲಿ ಸರ್ಕಾರದಿಂದ ರಾಜ್ಯದ ಧಾರ್ಮಿಕ ಸಂಸ್ಥೆಗಳ ದುರಸ್ಥಿ/ ಜೀರ್ಣೋದ್ಧಾರ/ ನವನಿರ್ಮಾಣಕ್ಕಾಗಿ ಅನುದಾನದ ಲಭ್ಯತೆಗನುಗುಣವಾಗಿ ಜಿಲ್ಲಾವಾರು 144 ಧಾರ್ಮಿಕ ಸಂಸ್ಥೆಗಳಿಗೆ ₹ 2304.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ತಾಲ್ಲೂಕುವಾರು ಅನುದಾನ ಬಿಡುಗಡೆ ಮಾಡಲಾಗುತ್ತಿಲ್ಲ.

ಯೋಜನೇತರ ಅಡಿಯಲ್ಲಿ ಮುಜರಾಯಿ ವ್ಯಾಪ್ತಿಗೆ ಬರುವ ದೇವಸ್ಥಾನಗಳ ಅಭಿವೃದ್ಧಿಗೆ ₹ 10.00 ಲಕ್ಷ ಮತ್ತು ಮುಜರಾಯೇತರ ದೇವಸ್ಥಾನಗಳ ಅಭಿವೃದ್ಧಿಗೆ ₹ 15.00 ಲಕ್ಷಗಳನ್ನು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡಲಾಗಿದೆ.

ಆರಾಧನಾ, ಗಿರಿಜನ ಉಪಯೋಜನೆ, ವಿಶೇಷ ಘಟಕ ಯೋಜನೆಗಳಲ್ಲಿ ಒದಗಿಸಿರುವ ಅನುದಾನದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು ₹ 15.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. ಮೊದಲನೆಯ ಕಂತು ₹ 5.00ಲಕ್ಷ ಬಿಡುಗಡೆ ಮಾಡಲಾಗಿರುತ್ತದೆ.

ನೆರೆ ಹಾವಳಿ ಪರಿಹಾರ

197(572); ಶ್ರೀ ಬಣಕಾರ್. ಯು. ಬಿ (ಹಿರೇಕೆರೂರು)

ಅ) 2013–14ರ ಮುಂಗಾರಿನ ನೆರೆ ಹಾವಳಿಯ ಸಂದರ್ಭದಲ್ಲಿ ಕುಮದ್ವತಿ ನದಿಯಿಂದ ಪ್ರವಾಹದ ನೀರು ಮಾಸೂರ ಗ್ರಾಮಕ್ಕೆ ನುಗ್ಗಿದಾಗ, ಮುಂದೆ ಈ ರೀತಿ ಆಗದಂತೆ ಮುಂಜಾಗ್ರತೆ ಕಾಮಗಾರಿ ಗಳನ್ನು ತೆಗೆದುಕೊಳ್ಳಲು ಗ್ರಾಮಸ್ಥರು ಹಾಗೂ ಗ್ರಾಮಪಂಚಾಯಿತಿ ಯವರು ಸೂಚಿಸಿದ ಕಾಮಗಾರಿಗಳು ಯಾವುವು;

ಆ) ನೆರೆ ಹಾವಳಿ ಪುನಃ ಬಂದಾಗ ತೊಂದರೆ ಆಗದಂತೆ ಸರಕಾರ ಹಾಕಿಕೊಂಡಿರುವ ಯೋಜನೆಗಳು ಯಾವುವು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಮಂತ್ರಿಗಳು)

ಅ) ಗ್ರಾಮ ಪಂಚಾಯತಿಯವರು ಸೂಚಿಸಿದ ಕಾಮಗಾರಿಗೆ ವಿವರ ಕೆಳಕಂಡಂತಿದೆ:

ಕ್ರ.ಸಂ	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ಮಾಸೂರ ಗ್ರಾಮದ ಕೊಪ್ಪಿಗೊಂಡ ಬೀದಿಯಲ್ಲಿ ಜೋಗಾರ ಮನೆ ಹಿತ್ತಲಿನಿಂದ ಗ್ರಾಮ ಪಂಚಾಯತ್ ರಸ್ತೆಯ ಮಂಗಳೂರ ಪುಟ್ಟಪ್ಪನವರ ಮನೆಯ ವರೆಗಿನ ಅಂಗಳದ ನೀರು ಸರಾಗವಾಗಿ	15.00